**ದಿನಾಂಕಃ17.04.2023 ರಂದು ಸಾಕ್ಷಿದಾರರು ಹಾಜರಿದ್ದು, ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಎದುರುದಾರರ ಪರ ಶ್ರೀ ಎಸ್.ಎಸ್. ವಕೀಲರಿಂದಃ–**

ನಾನು ನರ್ಸಿಂಗ್ ವಿದ್ಯಾಭ್ಯಾ ಮಾಡಿರುತ್ತೇನೆ. ಉಗ್ರನರಸಿಂಹಪ್ಪ ನನ್ನ ತಾತನಾಗಬೇಕು. ನನ್ನ ತಾತನಿಗೆ ಒಟ್ಟು 7 ಜನ ಮಕ್ಕಳು. 5 ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು. ನಾನು ಉಗ್ರನರಸಿಂಹಪ್ಪನ ಮಗಳಾದ ಶಾಂತಮ್ಮನವರ ಮಗಳು. ನನ್ನ ಗಂಡ ನನ್ನ ತಾಯಿಯ ತಮ್ಮ. ನನ್ನ ಗಂಡನ ತಮ್ಮನ ಹೆಸರು ಧನಂಜಯ. ನಾನು ಮತ್ತು ನನ್ನ ಅಕ್ಕ ಧನಂಜಯ ಮತ್ತು ಕೃಷ್ಣಕುಮಾರ್ ರವರನ್ನೇ ಮದುವೆ ಮಾಡಿಕೊಂಡಿರುತ್ತೇವೆ. ನನ್ನ ಅಕ್ಕ ಮತ್ತು ಧನಂಜಯ ಚೆನ್ನಾಗಿ ಜೀವನ ಮಾಡಿಕೊಂಡಿರುತ್ತಾರೆ.

ನಮ್ಮ ಮದುವೆ ಪ್ರೀತಿಸಿ ಆಗಿರುವ ಮದುವೆ ಎಂದರೆ ಸಾಕ್ಷಿಯು ಗುರುಹಿರಿಯರು ಒಪ್ಪಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಾನು ವಿದ್ಯಾಭ್ಯಾ ಮಾಡುವಾಗ ನಾನು ನರ್ಸಿಂಗ್ ವಿದ್ಯಾಭ್ಯಾಸದಲ್ಲಿ 2 ನೇ ವರ್ಷದಲ್ಲಿರುವಾಗ ನನ್ನ ಮದುವೆಯಾಗಿರುತ್ತದೆ. ನಾನು ಮದುವೆಯಾದ ಬಳಿಕ ಕಾಲೇಜಿಗೆ ನನ್ನ ಗಂಡನ ಮನೆಯಿಂದ ಓಡಾಡಿರುತ್ತೇನೆ. ನನ್ನ ಗಂಡ ನನ್ನ ವಿದ್ಯಾಭ್ಯಾಸಕ್ಕೆ ಹಣ ಖರ್ಚು ಮಾಡಿರುತ್ತಾನೆ ಎಂದರೆ ಸರಿಯಲ್ಲ.

ನಾನು ನನ್ನ ಗಂಡನ ಮನೆಯಲ್ಲಿ ಮೂರು ವರ್ಷ ಸಂಸಾರ ಮಾಡಿರುತ್ತೇನೆ. ಆಗ ನಾನು ಕೆಲಸಕ್ಕೆ ಹೋಗಿರುವುದಿಲ್ಲ. ನಾನು ಬೆಂಗಳೂರಿನ ಇಂದಿರಾ ನಗರದಲ್ಲಿರುವ ಇ.ಎಸ್.ಐ., ಆಸ್ಪತ್ರೆಯಲ್ಲಿ 6 ತಿಂಗಳು ಕೆಲಸ ಮಾಡಿರುತ್ತೇನೆ ನಂತರದಲ್ಲಿ ಬಿಟ್ಟಿರುತ್ತೇನೆ.

**ಮುಂದುವರಿದ ಪಾಟೀ–ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಅವಕಾಶ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನ ಕೈತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಹಿರಿಯೂರು.